

# ಔಷಧಿಯಾಗಿ ಕಾಕಿ

■ ಚಿತ್ರ ಬರಹ:
**ಸಿಂಚನಾ ಎಸ್.ಎನ್.**



ಮಲೆನಾಡಿನ ಮನೆಮನೆಯಲ್ಲೂ ಸಾಮಾನ್ಯವಾಗಿ ಕಾಣುವ ಚಿಕ್ಕ ಗಿಡ ಕಾಕಿ. ಕಾಗೆ ಸೊಪ್ಪಿನ ಗಿಡ, ಕಾಕಮಾಚಿ, ಕಾಚಿಸೊಪ್ಪು, ಕರಿಪೊಟ್ಲೆ ಎಂದೆಲ್ಲ ಕರೆಸಿಕೊಳ್ಳುವ ಇದರ ವೈಜ್ಞಾನಿಕ ಹೆಸರು ಸೊಲ್ಯಾನಂ ನೈಗ್ರಂ. ಇಂಗ್ಲಿಷ್‌ನಲ್ಲಿ ಇದಕ್ಕೆ `ಬ್ಲಾಕ್ ನೈಟ್ ಶೇಡ್' ಎನ್ನುತ್ತಾರೆ.

ಸ್ವಲ್ಪ ತೇವ ಇದ್ದರೆ ಸಾಕು. ಎಲ್ಲ ಕಾಲಗಳಲ್ಲೂ ಇದು ಸಂದಿಗೊಂದಿಗಳಲ್ಲೂ ಹುಟ್ಟಿಕೊಳ್ಳುತ್ತದೆ. ಕೆಲ ದಿನಗಳಲ್ಲೇ ಹೂವು ಬಿಟ್ಟು ಕಾಯಿಯಾಗಿ ಗೊಂಚಲು ಗೊಂಚಲು ಹಣ್ಣಾಗಿ ನೋಡುಗರ ಬಾಯಲ್ಲಿ ನೀರೂರಿಸುತ್ತದೆ.

ಚಿಕ್ಕಚಿಕ್ಕ ಟೊಮೆಟೊ ಹಣ್ಣಿನ ಗೊಂಚಲಿನಂತೆ ಇದು ಕಾಣಿಸುತ್ತದೆ. ನೋಡಲು ಕಪ್ಪುಬಣ್ಣ ಇದ್ದರೂ (ಅದಕ್ಕಾಗಿಯೇ ಕಾಕಿ ಹಣ್ಣು ಎಂದು ಹೆಸರು) ಇದರ ನಿಜವಾದ ಬಣ್ಣ ಕಡುನೀಲಿ.

ಬೇಡವೆಂದರೂ ಹುಟ್ಟಿಕೊಳ್ಳುವ ಇದೊಂದು ಕಳೆಸಸ್ಯ. ಆದರೆ ಇದರಲ್ಲಿನ ಔಷಧೀಯ ಗುಣ ಮಾತ್ರ ಅಪಾರ. ಮಲಬದ್ಧತೆಗೆ ರಾಮಬಾಣ. ಇದರಲ್ಲಿ ಎಂಟು ರಸಗಳಿವೆ. ಮಕ್ಕಳ ಆರೋಗ್ಯ ಕಾಪಾಡುವಲ್ಲಿ ಇದರದ್ದು ಪ್ರಮುಖ ಪಾತ್ರ. ಕಫನಾಶಕ ಆಗಿರುವ ಕಾಕಿಹಣ್ಣು, ಹೃದ್ರೋಗ ಸಮಸ್ಯೆಗಳಿಗೆ, ಕೆಮ್ಮು-ನೆಗಡಿ ಉಪಶಮನಕ್ಕೂ ಉತ್ತಮ ಔಷಧವಾಗಿದೆ.

ಇದಕ್ಕಾಗಿಯೇ ಮಲೆನಾಡು ಹಾಗೂ ಕರಾವಳಿಯಲ್ಲಿ ಇದರ ತಂಬುಳಿ ಜನಪ್ರಿಯ. ಈ ಗಿಡದ ಸೊಪ್ಪು ಮತ್ತು ಕಾಯಿಗಳನ್ನು ಸಾರು ಹುಳಿ ಪಲ್ಯಗಳಲ್ಲಿ ಬಳಸಲಾಗುತ್ತದೆ.

ದೇಹದಲ್ಲಿ ರಕ್ತದ ಪ್ರಮಾಣ ಕಡಿಮೆಯಿದ್ದಾಗ ಈ ಗಿಡದ ಚಿಗುರಿನ ತಂಬುಳಿ ಮಾಡಿ ಸೇವಿಸುತ್ತಾರೆ. ಬಾಯಿಹುಣ್ಣು, ಮಲ ಬದ್ಧತೆಯಿದ್ದಾಗ ಇದರ ಕುಡಿಗಳಿಂದ ಪಲ್ಯ ಮಾಡುತ್ತಾರೆ. ಇದರ ಗಿಡವನ್ನು ಅರೆದು ಕುದಿಸಿ ತಯಾರಿಸಿದ ಕಷಾಯ ಸೇವನೆಯು ಚರ್ಮರೋಗಕ್ಕೆ, ಮೂಲವ್ಯಾಧಿಗೆ, ಪಿತ್ತಕೋಶದ ಸಮಸ್ಯೆಗಳಿಗೆ ಔಷಧವೂ ಆಗಿದೆ.

ಇದರ ಇನ್ನೊಂದು ಪ್ರಬೇಧ ಬಿಳಿಗಣಿಕೆ ಹಣ್ಣು. ಕಾಕಿ ಹಣ್ಣಿಗಿಂತ ಗಾತ್ರದಲ್ಲಿ ದೊಡ್ಡದಾಗಿರುವ ಇವು ತುಸು ಹಳದಿಯಾಗಿರುತ್ತವೆ.

ಇಂಥ ಅಮೂಲ್ಯ ಗಿಡವನ್ನು ಕಳೆ ಎಂದು ಕಿತ್ತೆಸೆಯುವವರೇ ಹೆಚ್ಚು. ಮಲೆನಾಡು ಪ್ರದೇಶದಲ್ಲಿ ಇದರ ಬಗ್ಗೆ ತಿಳುವಳಿಕೆ ಇದ್ದವರು ಮಾತ್ರ ಇದರ ಪ್ರಯೋಜನ ಪಡೆಯುತ್ತಾರೆ.